

**ಸುಮಂಗಲಾ**

ಶಾಂತ ಕಿಟಕಿಯಿಂದ ಹೊರನೋಡುತ್ತ ಕೂತಿದ್ದಳು. ಕಣ್ಣ ಮುಂದೆ ಶೂನ್ಯವಿತ್ತು. ಮೂವತ್ತೇಳು ವರ್ಷ ಏರಿಳಿತಗಳ ಜೊತೆಗೆ ಹೆಗಲಾಗಿ ಏಗಿದ ಜೀವವೊಂದು, ಒಟ್ಟಿಗೇ ಊಟ ಮುಗಿಸಿ, ಕೈತೊಳೆಯಲು ಎದ್ದಿದ್ದೇ ಹಾಗೆಯೇ ತಟ್ಟನೆ ಕುಸಿಯುವುದೇ... ಬಚ್ಚಲಿನ ಸಿಂಕ್ ಅನ್ನೂ ತಲುಪದೇ ಯಾವುದೋ ಕಾಣದ ಲೋಕಕ್ಕೆ ದೇಹವನ್ನು ಇಲ್ಲೇ ಬಿಟ್ಟು ಹಾರುವುದೇ... ಹಾಗೆ ಕುಸಿದ ಅರ್ಧ ಗಂಟೆಗೆಲ್ಲ ಗಂಡ, ಅಪ್ಪ, ಮಾವ, ಅಣ್ಣ, ದೊಡ್ಡಪ್ಪ ಇತ್ಯಾದಿಯಾಗಿದ್ದ ವ್ಯಕ್ತಿ ಬರಿಯ ದೇಹವಾಗಿ, ಕ್ರಮೆಟೋರಿಯಂಗೆ ವಾಹನದಲ್ಲಿ ಸಾಗಿಸುವ ಬಾಡಿ ಆಗಿಬಿಡುವುದೇ...

ಕಳೆದೆರಡು ವರ್ಷದಿಂದ ಶಾಂತ ಎಲ್ಲಿಗೂ ಹೋಗಿರಲಿಲ್ಲ. ಗಂಡನಿಗೆ ಒಮ್ಮೆ ಲಘು ಹೃದಯಾಘಾತವಾದ ಮೇಲೆ ಆತನಿಗೆ ಮನೆ ಬಿಟ್ಟು ಹೋಗಲೇ ಭಯವಾಗಿಟ್ಟಿತ್ತು. ಆಗೀಗ ಆಸ್ಪತ್ರೆ, ಚೆಕ್‌ಅಪ್, ಅಪರೂಪಕ್ಕೊಮ್ಮೆ ನಾಟಕ, ಸಿನಿಮಾ, ಹೊರಗೆ ಊಟ, ಅಷ್ಟೇ... ಮತ್ತೆ ಹಾಗೆ ಹೋಗಿ, ಮನೆಯೊಳಗೆ ಬರುವಾಗ ಆತನ ಮುಖದಲ್ಲಿ ಫಕ್ಕನೆ ಮಿಂಚುವ ನೆಮ್ಮದಿ... ಮಗ, ಮಗಳಿಗೆ ಅರ್ಥವಾಗದ ಆ ಭಯವನ್ನು ಆತನಿಗೆ ಹಂಚಿಕೊಳ್ಳಲು ಸಾಧ್ಯವಾಗಿದ್ದು ಹೆಂಡತಿಯೊಂದಿಗೆ ಮಾತ್ರ. ಯಾರಿಗೂ ಆವರೆಗೆ ಗೊತ್ತಾಗದಂತೆ ಉಳಿಸಿದ್ದ ಒಂದಿಷ್ಟು ಹಣವನ್ನು ಕಳೆದ ತಿಂಗಳ ನಡುರಾತ್ರಿಯೊಮ್ಮೆ ಎಬ್ಬಿಸಿ ಕೊಟ್ಟಿದ್ದೂ ಹೆಂಡತಿಗೆ. ಇನ್ನು ಹೆಚ್ಚು ದಿನವಿಲ್ಲ ಎಂಬಂತಹ ಭಾವವೊಂದು ಕಾಡಿರಬಹುದೇ... ಮ್ಯಾಸಿವ್ ಹಾರ್ಟ್ ಅಟ್ಯಾಕ್ ಎನ್ನುವುದೊಂದು ದೇಹಕ್ಕಪ್ಪಳಿಸಿದ್ದೇ, ಎಲ್ಲ ಭಯಮೀರಿ ಮನೆದಾಟಿ, ಮನದಾಟಿ, ಜಗದಾಚೆ ಹೋಗುವಂತಾಯಿತೇ...

ಹಾಲ್‌ನಲ್ಲಿ ಕೂತವರು ಮಾತಾಡುತ್ತಿದ್ದರು. ಶಾಂತ ಸುಮ್ಮನೆ ಕೂತಿದ್ದಳು. ಎಲ್ಲರ ಮಾತುಕತೆ ಕೇಳುತ್ತ. 'ಒಹ್ ಸಾಕು ಮಾಡಿ ಒಣಮಾತು' ಎನ್ನುವ ತ್ರಾಣವಿಲ್ಲದೆ.

'ಅಮ್ಮಾ, ಅದೆಲ್ಲ ಹಿಂದಿನ ಕಾಲ್ದಲ್ಲಿ... ನೀನೇನು ಮದುವೆಯಾದ ಮೇಲೆ ಕುಂಕುಮ, ಬಳೆ ಇಟ್ಕೊಂಡಿದ್ದಲ್ಲವಲ್ಲ... ಬೋಳು ಹಣೆ, ಬೋಳು ಕೈ ನೋಡಕ್ಕೆ ಆಗಲ್ಲಮ್ಮ..." ಮಗಳ ಕಕ್ಕುಲಾತಿ.

'ಯಾವುದು ಬೋಳು ಮಗಳೇ... ಕಣ್ಣಿಗೆ ಕಾಣುವ ದೇಹವೇ ಅಥವಾ ಕರುಳಿಗೂ ಕಾಣದ ಮನಸ್ಸೇ...' ಶಾಂತ ಮನಸ್ಸಲ್ಲೇ ಹೇಳಿಕೊಂಡಳು.

"ಅಯ್ಯೋ ಅತ್ತಿಗೆ... ನೀವು ಹಿಂಗೆ ಬೋಳುಬೋಳಾಗಿದ್ರೆ ಅಣ್ಣನ ಆತ್ಮ ಏನು ಖುಷಿಯಾಗಿರುತ್ತಾ?"

'ಆಹಾ... ಬದುಕಿದ್ದಾಗಲೇ ಮನವನರಿಯಲಾಗದು, ಇನ್ನು ಆತ್ಮವ ಕಂಡವರಾರು; ಅರಿತವರಾರು' ಶಾಂತನ ತುಟಿಯಲ್ಲಿ ಕಿರುನಗೆ.

"ಗಂಡ ಸತ್ತರೆ ಎಲ್ಲ ತೆಗೆಯಬೇಕಂತೆ... ಅದೆಲ್ಲ ಗೊಡ್ಡ ಶಾಸ್ತ್ರ ದೊಡ್ಡಮ್ಮ... ದೊಡ್ಡಪ್ಪ ಇದ್ದಾಗ ನೀವು ಹೆಂಗಿರ್ತಿದ್ದರೋ ಹಂಗೇ ಈಗಲೂ ಇರಿ... ಯಾರಾದ್ರೂ ಏನಾದರೂ ಅಂದರೆ ನಾವು ನೋಡ್ಕೋತೀವಿ."

'ಒಹ್ ಅದೇ... ಅದೇ... ಹಂಗೇ ಇರುವುದು ಬೇಡವಾಗಿದೆ ನಂಗೆ...' ಮತ್ತೆ ಶಾಂತ ಒಳಮನದಲ್ಲೇ ನಕ್ಕಳು. ಈಗ ಒಳಬಂದ ಮಗ. "ಅಮ್ಮಾ... ನೀನ್ಯಾಕೆ ಬಳೆ, ಕುಂಕುಮ